**ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)**

**ಸತ್ರ ಪ್ರಕರಣ ಸಂಖ್ಯೆಃ 5022 /2020**

ಪ್ರಾ ಸಾ 3 ಚಾ ಸಾ 10

ಹೆಸರುಃ ಪುನೀತ್

ತಂದೆಯ ಹೆಸರುಃ ಸುರೇಂದ್ರ

ವಯಸ್ಸುಃ 29 ವರ್ಷ

ಉದ್ಯೋಗಃ ಎಲೆಕ್ಟ್ರಿಕ್ ಅಂಗಡಿ

ವಾಸಃ ಕಿರಂಗೂರು

**ದಿಃ 20.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಸಹಿ ಮಾಡಲು ಬರುತ್ತದೆ . ನಾನು ಸಹಿ ನೋಡಿದರೆ ಗುರುತಿಸುತ್ತೇನೆ . ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ . ಸಾಕ್ಷಿ ಸಹಿ ಗುರುತಿಸಿದ ದಾಖಲೆಯು ಮಹಜರು ದಾಖಲೆಯಾಗಿದ್ದು ಅದನ್ನು ನಿಪಿ 4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 4 (ಎ) ಎಂದು

ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 4-5 ವರುಷಗಳ ಹಿಂದೆ ಕಿರಂಗೂರು ರಸ್ತೆಯಲ್ಲಿ ನಿಂತಿದ್ದಾಗ ಪೊಲೀಸರು ಬಂದು ಇದಕ್ಕೆ ಸಹಿ ಹಾಕು ಎಂದು ಹೇಳಿದರು , ಹಾಗಾಗಿ ಅಲ್ಲಿ ಸಹಿ ಹಾಕಿದ್ದೇನೆ. ನಾನು ಸಹಿ ಹಾಕಿದ ಸಮಯ ನನಗೆ ನೆನಪಿಲ್ಲ. ನನ್ನ ಜೊತೆ ದರ್ಶನ್ ಎನ್ನುವವರು ಸಹಿ ಹಾಕಿದ್ದಾರೆ .

2. ಆ ಸಮಯದಲ್ಲಿ ನನ್ನ ಸಮಕ್ಷಮ ಏನನ್ನೂ ಅಮಾನತ್ತುಪಡಿಸಿಕೊಂಡಿಲ್ಲ.

(ಈ ಸಾಕ್ಷಿಯು ತನ್ನ ಹೇಳಿಕೆಗೆ ವಿರುದ್ಧವಾದ ಸಾಕ್ಷ್ಯವನ್ನು ನುಡಿದಿರುವುದರಿಂದ ಅಭಿಯೋಜಕರ ಕೋರಿಕೆಯಂತೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ.)

<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>

3. ದಿಃ 2.12.2019 ರಂದು ಸಂಜೆ 7 ರಿಂದ 8 ಗಂಟೆಯವರೆಗೆ ಅಮಲಮೇರಿ ಕೋಂ ಪ್ರಕಾಶ್ ಕುಮಾರ್ ಅವರ ಮನೆಯಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ನಾನು ಹಾಜರಾಗಿದ್ದೆ ಎಂದರೆ ಸುಳ್ಳು.

4. ಆ ಸಂದರ್ಬ ದಲ್ಲಿ ಅಮಲವೇರಿಯವರು ದರಿಸಿದ್ದ

ನೆಟಿಯನ್ನು ಹಾಗೂ ವೇಲ್ ನ್ನು ಹಾಜರುಪಡಿಸಿದರು ಹಾಗೂ ಸ್ಥಳದಲ್ಲಿ ಇದ್ದ ರಕ್ತದ ಕಲೆಯನ್ನು ಹಾಗೂ ಪಕ್ಕದಲ್ಲಿ ಸಾದಾ ಸಿಮೆಂಟ್ ನೆಲವನ್ನು ತೆಗೆದು ಚಿಕ್ಕ ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡರೆಂದರೆ ಸರಿಯಲ್ಲ.

5. ಚಾಸಾ2 ರವರು ಹಾಜರುಪಡಿಸಿದ ವೇಲ್ ತಿಳಿ ಪಿಂಕ್ ಬಣ್ಣದಾಗಿತ್ತು ಹಾಗೂ ಅದರಲ್ಲಿ ಅಲ್ಲಲ್ಲಿ ರಕ್ತದ ಕಲೆಯಾಗಿತ್ತು ಎಂದರೆ ಸರಿಯಲ್ಲ.

6. ನಾನು ಪ್ರಕರಣದ ಎಲ್ಲಾ ವಿಚಾರಗಳನ್ನು ತಿಳಿದು ಮಹಜರಿಗೆ ಸಹಿ ಹಾಕಿದ್ದೆ , ಆದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ</u>
<u>ಶ್ರೀ ಬಿ ಸಿ ಎಸ್ ವಕೀಲರಿಂದಃ</u>

ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)